ಪಿ. ಡಬ್ಲ್ಯೂಃ 1

(ಇಂದು ದಿನಾಂಕ 04-10-2023 ರಂದು ಸಾಕ್ಷಿದಾರರ ಪ್ರಮಾಣ ವಚನ ಭೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ – ಅರ್ಜಿದಾರರ ಪರವಾಗಿ ಶ್ರೀ ಆರ್.ಕೆ. ಎನ್ ವಕೀಲರಿಂದ.**

ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ.12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಸಿ.ಆರ್.ಬಿ. ವಕೀಲರಿಂದ.**

ಅಪಘಾತಕ್ಕೆ ಸಂಬಂಧಟ್ಟಂತೆ ಆಸಿಫ್ ಮತ್ತು ಅಪ್ಸಾನ್ ಎನ್ನುವವರ ವಿರುದ್ಧ ದೂರು ದಾಖಲು ಆಗಿತ್ತು. ನನ್ನ ಮುಖ್ಯ ವಿಚಾರಣೆಯ ಪ್ರ. ಪತ್ರವನ್ನು ಓದಿ ತಿಳಿದು ತಿಳಿದು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ನಮ್ಮ ವಿರುದ್ಧ ದಾಖಲಾಗಿರುವ ಪ್ರ.ವರ್ಥಮಾನ ವರದಿಯನ್ನು ನಾವಿಬ್ಬರೂ ಸಹ ಪ್ರಶ್ನಿಸಿರುವುದಿಲ್ಲ. ಅಪಗಾತದ ಕುರಿತಂತೆ ನಮ್ಮ ವಿರುದ್ಧ ಪ್ರ. ವ. ವರದಿ ತಯಾರಿಸಿ ತನಿಕೆ ಆದ ನಂತರ ಬೈಕ್ ಚಲಾಯಿಸಲು ನಮಗೆ ಪರವಾನಿಗೆ ಇಲ್ಲ ಎಂದು ಹೇಳಿಕೆ ಕೊಟ್ಟಿದ್ದೆ ಅಂದರೆ ಸರಿ. ಅದೇ ರೀತಿ ವಿಮೆ ಪಾಲಸಿ ಇಲ್ಲ ಎನ್ನುವ ವಿಚಾರ ನಾವು ನೀಡಿರುವ ಹೇಳಿಕೆಯಲ್ಲಿ ಕಂಡು ಬಂದಿದೆ ಅಂದರೆ ಸರಿ. ಆಸಿಫ್ ರವರ ದ್ವಿ ಚಕ್ರ ವಾಹನಕ್ಕೆ 3 ನೇ ಪಾರ್ಟಿ ಇನ್ಸುರೆನ್ಸ್ ಇದ್ದ ಬಗ್ಗೆ ನನಗೆ ನೆನಪಿಲ್ಲ. ಘಟನೆ ದಿನಾಂಕಃ10-06-2019 ರಂದು ಆಗಿತ್ತು. ಘಟನೆ ಆಗಿ 5 ತಿಂಗಳ ನಂತರ ನ್ಯಾಯಾಲಯಕ್ಕೆ ಖಾಸಗಿ ದೂರು ದಾಖಲಿಸಿರುವುದು ನನಗೆ ಗೊತ್ತಿಲ್ಲ. ಘಟನೆ ನನ್ನ ತಪ್ಪಿನಿಂದಲೇ ಅಗಿದೆ ಎಂದು ಆಸಿಫ್ ಪೈಯಾಜ್ ಅಹಮದ್ ರವರು ದೃಢೀಕೃತ ಪ್ರಮಾಣ ಪತ್ರ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿಯೂ ಸಹ ಪ್ರತ್ತೇಕ ಪ್ರ.ವ. ವರದಿಯನ್ನು ತಯಾರಿಸಿದ್ದು ನನಗೆ ಗೊತ್ತಿಲ್ಲ.

ಪಿ. ಡಬ್ಲ್ಯೂಃ 1

ಆ ದಿನ ನಾವು ಶಿರಸಿಯಿಂದ ಚಂದ್ರಗುತ್ತಿಗೆ ಹೋಗುತ್ತಿದ್ದೆವು. ಚಂದ್ರಗುತ್ತಿಯಿಂದ ಶಿರಸಿಗೆ ಬರುತ್ತಿದ್ದ ಆಸಿಫ್ ರವರ ವಾಹನಕ್ಕೆ ನಾವು ನಮ್ಮ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಅಪಘಾತಪಡಿಸಿದೆವು ಅಂದರೆ ಸರಿಯಲ್ಲ. ಆಸಿಫ್ ರವರ ಪ್ರಕಾರ ಮುಂದೆ ಹೋಗುತ್ತಿದ್ದ ಟ್ರಕ್ಕನ್ನು ಓವರ್ ಟೇಕ್ ಮಾಡುವ ಸಂದರ್ಭದಲ್ಲಿ ಅಪಘಾತವಾಯಿತು ಅಂದರೆ ಸರಿಯಲ್ಲ. ಆ ರೀತಿಯಾಗಿ ಅಪಘಾತವಾಯಿತು ಎಂದು ಆಸಿಫ್ ರವರ ಮರುಹೇಳಿಕೆ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಟ್ರಕ್ ಅತೀ ವೇಗವಾಗಿ ಬಂದು ಅಪಘಾತಪಡಿಸಿತ್ತು ಎಂದು ನಾನು ದೂರು ಕೊಟ್ಟಿಲ್ಲ ಹಾಗೂ ಈವತ್ತಿನವರೆಗೆ ಹೇಳಿಕೆ ಕೊಟ್ಟಿಲ್ಲ. ನಾವಿಬ್ಬರು ಮಾಡಿದ ತಪ್ಪಿನಿಂದ ಅಪಘಾತವಾಗಿದ್ದು. ನಾನು, ಆಸಿಫ್ ಮತ್ತು ಪೋಲೀಸರು ಸೇರಿಕೊಂಡು ದೋಷಾರೋಪಣಾ ಪಟ್ಟಿ ಸಲ್ಲಿಸಿ ಪರಿಹಾರ ಪಡೆಯಲು ಸುಳ್ಳು ಪರಿಹಾರದ ಅರ್ಜಿಯನ್ನು ನ್ಯಾಯಾಲಯಕ್ಕೆ ನೀಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಪರಿಹಾರ ಪಡೆಯಲು ನಾನು ಅರ್ಹನಲ್ಲ ಅಂದರೆ ನನಗೆ ಗೊತ್ತಿಲ್ಲ.

ಅಪಪಾತದಿಂದ ನಾನು ರಸ್ತೆಯ ಮೇಲೆ ಉರುಳಿ ಬಿದ್ದ ಕಾರಣ ನನ್ನ ಕಾಲು, ಸೊಂಟ, ತಲೆಗೆ, ಕುತ್ತಿಗೆಗೆ ತೀವ್ರ ಸ್ವರೂಪದ ಗಾಯಗಳುಂಟಾಗಿರುತ್ತದೆ ಮತ್ತು ನನ್ನ ಬಾಯಿಗೆ ತೀವ್ರ ಗಾಯ ಅಗಿ ಹಲ್ಲುಗಳು ಮುರಿದು ಮತ್ತು ಬಲಗೈಗೆ ಗಾಯ ಅಗಿರುತ್ತದೆ. ನಂತರ ತಕ್ಷಣ ಅಂಬುಲೆನ್ಸ ಮುಖಾಂತರ ಶಿರಸಿಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ತೆಗಾಗಿ ಒಯ್ಯಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಆಸ್ಪತ್ರೆಯಲ್ಲಿ ನನಗೆ ಉಂಟಾಗಿದ್ದ ಗಾಯಗಳಿಗೆ ಹೆಚ್ಚಿನ ಚಿಕಿತ್ಸೆಯ

ಅವಶ್ಯಕತೆಯಿದ್ದುದ್ದರಿಂದ ನನ್ನನ್ನು ಉಡುಪಿಯ ಅದರ್ಶ ಆಸ್ಪತ್ರೆಗೆ ಚಿಕಿತ್ಸೆಗಾಗಿ ಒಯ್ದು, ಒಳರೋಗಿಯಾಗಿ ದಾಖಲಿಸಿಕೊಂಡು ನನಗೆ ಆದ ಎಲ್ಲಾ ಗಾಯಗಳಿಗೆ ದಿನಾಂಕಃ 10-06-2019 ರಿಂದ 24-06-2019 ರವರೆಗೆ ಹಾಗೂ 22-07-2019 ರಿಂದ 25-07-2019 ರ ವರೆಗೆ ಒಟ್ಟು 19 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆದ ಗಾಯದಿಂದಾದ ನೋವಿನಿಂದ ನಾನು ಸುಮಾರು ಒಂದುವರೆ ವರ್ಷಗಳ ಕಾಲ ಸಂಪೂರ್ಣ ವಿಶ್ರಾಂತಿಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಷದ್ರಿ ಅಪಘಾತದಿಂದ ಆದ ಗಾಯದ ನೋವಿನಿಂದ ನಾನು ಈಗಲೂ ಸಹ ನನ್ನ ಕುತ್ತಿಗೆಯನ್ನು ತಿರುಗಿಸುವಲ್ಲಿ ತೊಂದರೆಯನ್ನು ಅನುಭವಿಸುತ್ತಿದ್ದೇನೆ, 5 ಹಲ್ಲುಗಳನ್ನು ಕಳೆದುಕೊಂಡಿರುತ್ತೇನೆ ಇದರಿಂದ ನನಗೆ ಆಹಾರ ಸೇವಿಸಲು ಕೂಡಾ ತೊಂದರೆ ಆಗಿರುತ್ತದೆ. ಅ ಕಾರಣ ನಾನು ಈಗಲೂ ಖಾಯ ಆಗಿ ನೋವಿನ ಗುಳಿಗೆಗಳನ್ನು ಸೇವಿಸುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಅಪಘಾತದ ಸಂಬಂಧ ಚಿಕಿತ್ಸೆಗಾಗಿ, ಆಸ್ಪತ್ರೆಯ ಖರ್ಚು, ಔಷಧೋಪಚಾರದ ಖರ್ಚು, ಆಂಬ್ಯುಲೆನ್ಸ ಖರ್ಚು, ಓಡಾಟದ ಖರ್ಚು ಹಾಗೂ ಚಿಕಿತ್ಸಾ ಸಹಾಯಕರ ಖರ್ಚು ಅಂತಾ ಸುಮಾರು ರೂಪಾಯಿ 3,00,000-00 ಕ್ಕೂ ಮಿಕ್ಕಿ ಹಣವ್ಯಯಾ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿ. ಡಬ್ಲ್ಯೂ: 1

ನಾನು ಅಪಘಾತಕ್ಕಿಂತಲೂ ಮೊದಲು ನಾನು ಸಧೃಡ ಮತ್ತು ಆರೋಗ್ಯವಂತನಾಗಿದು, ವ್ಯಾಪಾರ ಮಾಡುತ್ತಾ ನಾನು ತಿಂಗಳಿಗೆ ಸುಮಾರು 15,000-00 ರೂಪಾಯಿಯನ್ನು ಸಂಪಾದಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕೆಲಸವು ಬಹಳ ಶ್ರಮದಾಯಕ ಕೆಲಸವಾಗಿದ್ದು, ಬಹಳ ಹೊತ್ತು ನಿಂತು ಮತ್ತು ಒಂದೆ ಕಡೆ ಕುಳಿತು ಮಾಡಬೇಕಾದ ಕೆಲಸವಾಗಿರುವುದರಿಂದ ದೈಹಿಕವಾಗಿ ತೊಂದರೆಯನ್ನು ಅನುಭವಿಸುತ್ತಿದ್ದೇನೆ ಹಾಗೂ ನನಗೆ ಮೊದಲಿನಂತೆ ಯಾವುದೇ ಕೆಲಸಗಳನ್ನು ಮಾಡಲು ಸಾಧ್ಯವಾಗದೇ ಆದಾಯ ನಷ್ಟ ಉಂಟಾಗುತ್ತಿದೆ ಹಾಗೂ ಈ ಅಪಘತದಿಂದ ಉಂಟಾದ ಗಾಯ-ನೋವುಗಳಿಂದಾಗಿ ನಾನು ದೈಹಿಕವಾಗಿ ಹಾಗೂ ಮಾನಸಿಕವಾಗಿ ತುಂಬಾ ತೊಂದರೆಗೆ ಸಿಲುಕಿರುತ್ತೇನೆ ಎಂದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಶಿರಸಿ